ಪಿಡಬ್ಲ್ಯೂ.1

**ಇಂದು ದಿನಾಂಕ 21-02-2024 ರಂದು ಪಿಡಬ್ಲ್ಯೂ-1 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಿಂದ**

ನನ್ನ ಕುಟುಂಬಕ್ಕೆ ಒಟ್ಟು ಎರಡು ಆಸ್ತಿಗಳು ಇವೆ. ನಮ್ಮ ಕುಟುಂಬಕ್ಕೆ ಮೂರು ಆಸ್ತಿಗಳು ಇದ್ದರೂ ಸಹ ಎರಡು ಆಸ್ತಿಗಳು ಇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ನನ್ನ ತಾಯಿಯ ಹೆಸರಿನಲ್ಲಿ ಇವೆ ಎಂದರೆ ಸರಿ. ದಾವಾ 1ನೇ ಸ್ವತ್ತನ್ನು 1976 ನೇ ಸಾಲಿನಲ್ಲಿ ಮತ್ತು ದಾವಾ 2ನೇ ಸ್ವತ್ತಿನಲ್ಲಿ 1977 ರಲ್ಲಿ ಒಟ್ಟು ಕುಟುಂಬದ ಪರವಾಗಿ ನಮ್ಮ ತಾಯಿಯ ಹೆಸರಿನಲ್ಲಿ ಖರೀದಿಸಲಾಗಿದೆ ಎಂದರೆ ಸರಿಯಲ್ಲ. 1984 ರಲ್ಲಿ ಆಂಧ್ರ ಪ್ರದೇಶ ಅನಂತಪುರ ಜಿಲ್ಲೆಯ ಲೇಪಾಕ್ಷಿ ಗ್ರಾಮದಲ್ಲಿ ಸೈಯದ್ ಇಸ್ಲಾ ಪಾಷ ರವರಿಂದ 10 ಸಾವಿರ ರೂಪಾಯಿಗಳಿಗೆ ಒಟ್ಟು ಕುಟುಂಬದಲ್ಲಿ ಇದ್ದಾಗ 4 ವರೆ ಎಕರೆ ಜಮೀನನ್ನು ಖರೀದಿಸಲಾಗಿದೆ ಎಂದರೆ ಸರಿಯಲ್ಲ.

2. 1ನೇ ಪ್ರತಿವಾದಿ ನನ್ನ ಅತ್ತಿಗೆ. 1ನೇ ಪ್ರತಿವಾದಿಯ ಇಬ್ಬರು ಸಹೋದರಿಯರು ಅಂತರಪುರದ ಲೇಪಾಕ್ಷಿ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. 1ನೇ ಪ್ರತಿವಾದಿಯ ಸಹೋದರಿಯವರ ಮುಖಾಂತರ ನಾನು ಲೇಪಾಕ್ಷಿ ಗ್ರಾಮದಲ್ಲಿ ಮೇಲೆ ಹೇಳಿದ 4 ವರೆ ಜಮೀನನ್ನು ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಓಬರೆಡ್ಡಿ ಎಂಬುವವರ ಮುಖಾಂತರ ಲೇಪಾಕ್ಷಿ ಗ್ರಾಮದಲ್ಲಿ 4 ವರೆ ಜಮೀನನ್ನು ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಂಜೀವಪ್ಪ ಎಂಬುವವರರಿ ಮೂಲಕ ಮೇಲೆ ಹೇಳಿದ 4 ವರೆ ಜಮೀನ್ನು ಖರೀಸಿದ್ದು, ಸದರಿ ಖರೀದಿ ಪತ್ರಕ್ಕೆ ಸಂಜೀವಿಪ್ಪ ಸಾಕ್ಷಿದಾರರರಾಗಿರುತ್ತಾರೆ ಎಂದರೆ ಸರಿಯಲ್ಲ.

3. ನಮ್ಮ ಒಟ್ಟು ಕುಟುಂಬದ ವ್ಯವಹಾರ ನಾನು ನೋಡಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಅಣ್ಣ ನೋಡಿಕೊಳ್ಳುತ್ತಿದ್ದರು. 1984 ನೇ ಸಾಲಿನಲ್ಲಿ ನಾನು ಒಟ್ಟು ಕುಟುಂಬದಲ್ಲಿ ವಾಸವಾಗಿದ್ದೆ ಎಂದರೆ ಸರಿಯಲ್ಲ. ನಾನು ಸದರಿ 4 ವರೆ ಜಮೀನ್ನು ಒಟ್ಟು ಕುಟುಂಬದ ಆಸ್ತಿಯಾಗಿದ್ದರು ಸಹ ಈ ದಾವೆಗೆ ಸೇರಿಸದೆ , ದಾವಾ 1 ಮತ್ತು 2ನೇ ಸ್ವತ್ತನ್ನು ಮಾತ್ರ ಸೇರಿಸಿ ಸುಳ್ಳು ದಾವೆ ಸಲ್ಲಿಸಿ ಪ್ರತಿವಾದಿಗಳಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಮಹಿಳೆ ಆಗಿದ್ದು ಅವರಿಗೆ ಒಟ್ಟು ಕುಟುಂಬದ ಆಸ್ತಿಯಲ್ಲಿ ಜಮೀನು ಕೊಡಬೇಕಾಗುತ್ತದೆ ಎಂದು ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಒಟ್ಟು ಕುಟುಂಬದಲ್ಲಿ ನಾನೊಬ್ಬನೇ ಬದುಕಿದ್ದು, ನನ್ನ ಇಬ್ಬರು ಸಹೋದರರು ಮೃತಪಟ್ಟಿದ್ದು, ನಾನೇ ಒಟ್ಟು ಕುಟುಂಬದ ವ್ಯವಹಾರವನ್ನು

ನೋಡಿಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಹೋದರಿಯರಿಗೆ ಈಗಾಗಲೇ ಪಂಚಾಯ್ತಿಯಲ್ಲಿ ದಾವಾ ಸ್ವತ್ತಿನಲ್ಲಿ ಯಾವುದೇ ಭಾಗ ಬೇಡವೆಂದು ಹಣ ಕೊಟ್ಟು ತೀರ್ಮಾನವಾಗಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

**ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**

ಪಾಟೀ ಸವಾಲುಃ 5 ನೇ ಪ್ರತಿವಾದಿ ಪರ ವಕೀಲರಿಂದಃ

ಈ ದಾವೆಯನ್ನು ವಾದಿಯಾದ ನನ್ನ ಸಹೋದರಿ ಸಲ್ಲಿಸಿರುತ್ತಾರೆ. ವಾದಿ ನನ್ನ ಸಹೋದರಿ ಎಂದು ತೋರಿಸಲು ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ವಾದಿ ಸುಮಾರು 15 ವರ್ಷ ದಿಂದ ಅನಾರೋಗ್ಯದಿಂದ ಬಳಲುತ್ತಿರುತ್ತಾರೆ. ವಾದಿಗೆ ಕುಳಿತುಕೊಳ್ಳಲು ಮತ್ತು ನಡೆದಾಡಲು ಸಾದ್ಯವಾಗುವುದಿಲ್ಲ. ವಾದಿಗೆ ಈಗ 50 ವರ್ಷ ವಯಸ್ಸು. ವಾದಿ ಅವರಿಗೆ ಇರುವ ಕಾಯಿಲೆ ಸಂಬಂದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ವಾದಿ ಎಲ್ಲಿ ವಾಸವಾಗಿರುತ್ತಾರೋ ಅಲ್ಲೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಾರೆ.

2. ವಾದಿ ದಾವೆ ಸಲ್ಲಿಸುವ ಕಾಲಕ್ಕೆ ಬೆಟ್ಟನಹಳ್ಳಿಯಲ್ಲಿ ವಾಸ ಇದ್ದು, ಈಗ ದೊಡ್ಡಬಳ್ಳಾಪುರ ತಾಲ್ಲೂಕು, ದಿಬ್ಬೂರು ಗ್ರಾಮದಲ್ಲಿ ತೋಟದ ಮನೆಯಲ್ಲಿ ತನ್ನ ಗಂಡ ಮತ್ತು ಮಕ್ಕಳೊಂದಿಗೆ ವಾಸವಿರುತ್ತಾರೆ. ವಾದಿಗೆ ಕುಳಿತುಕೊಳ್ಳಲು ಮತ್ತು ನಡೆದಾಡಲು ಸಾದ್ಯವಿಲ್ಲ ಎಂಬುದರ ಬಗ್ಗೆ ವೈದ್ಯರ ಬಳಿ ಪ್ರಮಾಣ ಪತ್ರ ಪಡೆದು ನ್ಯಾಯಾಲಯಕ್ಕೆ ಹಾಜರುಮಾಡಿರುವುದಿಲ್ಲ ಎಂದರೆ ಸರಿ. ವಾದಿ ಈಗಲೂ ಆರೋಗ್ಯವಾಗಿದ್ದಾರೆ ಎಂದರೆ ಸರಿ.

3 ಈ ದಾವೆಯ ಬಗ್ಗೆ ಸಂಪೂರ್ಣ ಮಾಹಿತಿ ನನಗೆ ಇದೆ. ದಾವಾ ಸ್ವತಿನ ಸರ್ವೆ ನಂ. 162 ಆಗಿರುತ್ತದೆ. ವಾದಿಯು ಸುಮಾರು 40 ವರ್ಷಗಳಿಂದಲೂ ದಾವಾ ಸ್ವತ್ತಿನಲ್ಲಿ ಸ್ವಾದೀನಾನುಭವದಲ್ಲಿರುತ್ತಾರೆ. ದಾವಾ ಸ್ವತ್ತು ವಾದಿಗೆ ಸೇರಿದ್ದು ಎಂದು ತೋರಿಸಲು ನ್ಯಾಯಾಲಯಕ್ಕೆ ಹಕ್ಕುಪತ್ರವನ್ನು ಹಾಜರುಮಾಡಿರುತ್ತೇನೆ. ನಾನು ಯಾವುದೇ ಹಕ್ಕುಪತ್ರ ಹಾಜರುಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಒಟ್ಟು ವಿಸ್ತೀರ್ಣ 36 ಗುಂಟೆ. ಸರ್ವೆ ನಂ. 162 ರ ಒಟ್ಟು ವಿಸ್ತೀರ್ಣ 192 ಎಕರೆ. ಸರ್ವೆ ನಂ. 162 ಸರ್ಕಾರಿ ಜಮೀನಾಗಿದ್ದು ಗೋಮಾಳ ಆಗಿರುತ್ತದೆ ಎಂದರೆ ಸರಿ. ಸದರಿ ಜಮೀನನ್ನು ವ್ಯವಸಾಯ ಮಾಡಿಕೊಂಡು ಸ್ವಾದೀನದಲ್ಲಿದ್ದವರಿಗೆ ನಕ್ಷೆ ತಯಾರಿಸಿ ಬ್ಲಾಕ್ ಆಧಾರದ ಮೇಲೆ ಮಂಜೂರು ಮಾಡಿರುತ್ತಾರೆ ಎಂದೆರ ಸರಿ. ವಾದಿಯು ದಾವಾ ಸ್ವತ್ತನ್ನು ಮಂಜೂರು ಮಾಡುವ ಕಾಲಕ್ಕೆ ನಕ್ಷೆ ತಯಾರಿಸಲಾಗಿರುತ್ತದೆ. ಸದರಿ ನಕ್ಷೆ ಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ನಕ್ಷೆಯನ್ನು ನ್ಯಾಯಾಲಯಕ್ಕೆ

ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

4. ದಾವಾ ಸ್ವತ್ತಿನ ಚೆಕ್ಕುಬಂದಿ

ಪೂರ್ವಕ್ಕೆಃ ಈರಣ್ಣರವರ ಸರ್ವೆ ನಂ. 162 ರ ಜಮೀನು

ಪಶ್ಚಿಮಕ್ಕೆಃ ನನ್ನ ಜಮೀನು ಮತ್ತು ಅಶೋಕ್ ಚೌರಪ್ಪರವರ ಜಮೀನು

ಉತ್ತರಕ್ಕೆಃ ಕೆರೆ

ದಕ್ಷಿಣಕ್ಕೆಃ ಹರೀನಾಥ್ ರವರ ಸರ್ವೆ ನಂ. 162 ರ ಜಮೀನು.

5. ದಾವಾ ಸ್ವತ್ತಿನ ಪಶ್ಚಿಮಕ್ಕೆ ನನ್ನ ಜಮೀನನ್ನು 1984 ನೇ ಇಸವಿಯಲ್ಲಿ ಮುನಿರಾಜು ಮತ್ತು ರೇವಣ್ಣ ಎಂಬುವವರಿಂದ ಕ್ರಯಕ್ಕೆ ಖರೀದಿಸಿರುತ್ತೇನೆ. ಸದರಿ ಸ್ವತ್ತು ನನ್ನ ಕ್ರಯದಾರರರಿಗೆ ನಾನು ಕ್ರಯಕ್ಕೆ ಖರೀದಿಸಿದ ಜಮೀನು ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ.

6. ಸರ್ವೆ ನಂ. 162 ರಲ್ಲಿನ ಜಮೀನನ್ನು ದರ್ಖಾಸ್ ಮೂಲಕ ಮಂಜೂರು ಮಾಡಿರುತ್ತಾರೆ ಎಂದರೆ ಸರಿ. ದರ್ಖಾಸ್ ಮಾಡುವಾಗ ದರ್ಖಾಸ್ ಪೋಡಿ ಆಗಬೇಕೆಂದರೆ ಸರಿ. ದಾವಾ ಸ್ವತ್ತು ಪೋಡಿಯಾಗಿರುತ್ತದೆ ಇತರೇ ಸ್ವತ್ತುಗಳು ಪೋಡಿಯಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಸರ್ಕಾರಿ ಜಮೀನನ್ನು ದರ್ಖಾಸ್ ಮಂಜೂರು ಮಾಡುವಾಗ ಪೋಡಿ ಮಾಡಲಾಗುತ್ತದೆ ಎಂದರೆ ಸರಿ. ಸರ್ವೆ ನಂ. 162 ರ ಜಮೀನನ್ನು ದರ್ಖಾಸ್ ಮಂಜೂರು ಸಮಯದಲ್ಲಿ ಪೋಡಿ ಮಾಡಿರುತ್ತಾರೆ ಎಂದರೆ ಸರಿ. 2012-13 ನೇ ಸಾಲಿನಲ್ಲಿ ಪೋಡಿ ಆಗಿರುತ್ತದೆ. ಪೋಡಿ ಆದ ನಂತರ ಹೊಸ ಸರ್ವೆ ನಂಬರ್ ನೀಡಲಾಗಿದೆ ಎಂದರೆ ಸರಿ. ದಾವಾ ಸ್ವತ್ತು ಮೊದಲು 162 ಆಗಿದ್ದು, ಪೋಡಿಯಾದ ನಂತರ 273 ಆಗಿರುತ್ತದೆ. ಹೊಸ ಸರ್ವೆ ನಂಬರ್ ಅನ್ನು ನಾನು ವಾದಪತ್ರದಲ್ಲಿ ಹೇಳಿರುವುದಿಲ್ಲ, ಏಕೆಂದರೆ ದಾವೆ ಸಲ್ಲಿಸುವ ಕಾಲಕ್ಕೆ ಪೋಡಿ ಆಗಿರಲಿಲ್ಲ. ಸರ್ವೆ ನಂ. 162 ರ ಪೂರ್ಣ ವಿಸ್ತೀರ್ಣ ಪೋಡಿಯಾಗಿಲ್ಲ ಎಂದರೆ ಸರಿಯಲ್ಲ.

7. ದಾವಾ ಸ್ವತ್ತನ್ನು 1 ರಿಂದ 4 ನೇ ಪ್ರತಿವಾದಿಗಳು ಸುಮಾರು 40 ವರ್ಷಗಳಿಂದ ಸ್ವಾಧಿನಲ್ಲಿದ್ದುಕೊಂಡು ವ್ಯವಸಾಯ ಮಾಡುತ್ತಿರುತ್ತಾರೆ ಎಂದರೆ ಸುಳ್ಳು. ಪ್ರತಿವಾದಿಗಳ ಸ್ವಾದೀನವನ್ನು ಸ್ವಾದೀನದ ಆಧಾರದ ಮೇಲೆ ಪಹಣಿಯನ್ನು ಅಂಗೀಕರಿಸಲಾಗಿದೆ ಎಂದರೆ ಸುಳ್ಳು. ದಾವಾ ಸ್ವತ್ತು ಮತ್ತು ಪ್ರತಿವಾದಿಗಳು ಸ್ವಾದೀನದಲ್ಲಿರುವ ಸ್ವತ್ತು ಬೇರೆ ಬೇರೆ ಎಂದರೆ ಪ್ರತಿವಾದಿಗಳು ಸರ್ವೆ ನಂ. 162 ರ ಯಾವುದೇ ಸ್ವತ್ತಿನಲ್ಲಿ ಸ್ವಾದೀನದಲ್ಲಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ಸ್ವತ್ತನ್ನು ವಾದಿ ಒತ್ತುವರಿ ಮಾಡಿರುತ್ತಾರೆ ಎಂದರೆ ಸುಳ್ಳು.

8. 1 ರಿಂದ 4 ನೇ ಪ್ರತಿವಾದಿಗಳಿಗೆ ಐಹೆಚ್ ಸಿ 13/1997-98 ರಂತೆ ಖಾತೆ ಇದ್ದು, ಸದರಿ

ಖಾತೆ ಆದಾರದ ಮೇಲೆ ಪಹಣಿಗಳು 1 ರಿಂದ 4 ನೇ ಪ್ರತಿವಾದಿಗಳ ಹೆಸರಿಗೆ ಬಂದ ನಂತರ ಸದರಿ ಸ್ವತ್ತನ್ನು 5 ನೇ ಪ್ರತಿವಾದಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕ್ರಯಪತ್ರದ ಆಧಾರದ ಮೇಲೆ 5 ನೇ ಪ್ರತಿವಾದಿಯ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸುಳ್ಳು. ವಾದಿ ಆರೋಗ್ಯವಾಗಿ ಇದ್ದು, ದಾವಾ ಸ್ವತ್ತಿನ ಪಶ್ಚಿಮಕ್ಕೆ ನಾನು ಸ್ವಾದೀನಲ್ಲಿರುವುದರ ಅಕ್ರಮ ಲಾಭ ಪಡೆಯಲು ಜಿಪಿಎ ಸೃಷ್ಟಿಸಿಕೊಂಡು ಈ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

9. 5 ನೇ ಪ್ರತಿವಾದಿ ಹೆಸರಿಗೆ ಆಗಿರುವ ಕ್ರಯಪತ್ರ ರದ್ದು ಪಡಿಸಲು ಕೋಡಿ ನಾನು ದಾವೆ ಸಲ್ಲಿಸಲಾಗಿದೆ. ಸದರಿ ಕ್ರಯಪತ್ರವನ್ನು ರದ್ದುಪಡಿಸುವಂತೆ ದಾವೆಯಲ್ಲಿ ನಾನು ಕೋರಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಾದ 36 ಗುಂಟೆಗೂ 1 ರಿಂದ 4 ನೇ ಪ್ರತಿವಾದಿಗಳ ಸ್ವಾದೀನದಲ್ಲಿರುವ ಒಂದು ಎಕರೆ 20 ಗುಂಟೆ ಜಮೀನಿಗೆ ಯಾವುದೇ ಸಂಬಂದ ಇರುವುದಿಲ್ಲ, ಪ್ರತಿವಾದಿಗಳ ಸ್ವತ್ತನ್ನು ಅಕ್ರಮವಾಗಿ ಪಡೆದುಕೊಳ್ಳಲು ಈ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

**ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**

ಓ.ಎಸ್.ನಂ.1032/2012,

ಪಿಡಬ್ಲ್ಯೂ.1

**ಇಂದು ದಿನಾಂಕ 07-07-2023 ರಂದು ಪಿಡಬ್ಲ್ಯೂ-1 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪ್ರತಿವಾದಿ ಮತ್ತು ಅವರ ಪರ ವಕೀಲರನ್ನು ಕೂಗಿ ಕರೆಯಲಾಗಿ, ಗೈರು ಹಾಜರು, ಪಾಟೀ ಸವಾಲು ಮುಂದೂಡಲು ಯಾವುದೇ ಸಕಾರಣಗಳು ಇರುವುದಿಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಮರು ವಿಚಾರಣೆ ಇಲ್ಲ)

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

**ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**

ಓ.ಎಸ್.ನಂ.420/2010,

ಪಿಡಬ್ಲ್ಯೂ.1

**ಇಂದು ದಿನಾಂಕ 07-07-2023 ರಂದು ಪಿಡಬ್ಲ್ಯೂ-1 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

1 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರನ್ನು ಕೂಗಿ ಕರೆಯಲಾಗಿ, ಗೈರು ಹಾಜರು, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಮರು ವಿಚಾರಣೆ ಇಲ್ಲ)

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

**ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**

ಓ.ಎಸ್.ನಂ.808/2013,

ಪಿಡಬ್ಲ್ಯೂ.1

**ಇಂದು ದಿನಾಂಕ 05-07-2023 ರಂದು ಪಿಡಬ್ಲ್ಯೂ-1 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

1 ನೇ ಪ್ರತಿವಾದಿ ರವರು ಲಿಖಿತ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ ಮತ್ತು 2 ನೇ ಪ್ರತಿವಾದಿ ಏಕಪಕ್ಷಿಯವಾಗಿರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಮರು ವಿಚಾರಣೆ ಇಲ್ಲ)

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

**ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**